# ಪ್ರಾರ್ಥನೆ

## ಸ್ವಾಮಿ ವಿವೇಕಾನಂದ ಸುಪ್ರಭಾತ

**ಭು**ವನೇಶ್ವರೀತನಯ, ರಾಮಕೃಷ್ಣರ ಶಿಷ್ಯ
ನವಯುಗದ ಹರಿಕಾರ, ಲೋಕಮಾನ್ಯ,
ವೇದಾಂತಕೇಸರಿಯೆ, ದಾಂತರ ಶಿರೋಮಣಿಯೆ,
ಮೌಲ್ಯಗಳ ಗಣಿಯೆ, ದಣಿವರಿಯದವನೆ,
ಶ್ರೀವಿವೇಕಪ್ರಭೋ, ತವ ಸುಪ್ರಭಾತಂ! ॥ ೧ ॥

''**ಸೋ**ದರಿಯರೇ, ಸೋದರರೆ !'' ಎಂದು ಪಾಶ್ಚಾತ್ಯ
ಜನಸಮೂಹವನು ಸಂಬೋಧಿಸಿದೆಯೈ ;
ಬೆರಗಿನ ತರಂಗಗಳು ಚಪ್ಪಾಳೆ ಮಳೆಯಾಗಿ,
ಉಲ್ಲೋಲಕಲ್ಲೋಲವಾಯ್ತು ಸಭೆಯು !
ಶ್ರೀವಿವೇಕಪ್ರಭೋ, ತವ ಸುಪ್ರಭಾತಂ! ॥ ೨ ॥

**ಅ**ನ್ಯದೇವತೆಗಳನು ಬಿಸುಟು ನೀನು, 'ದರಿದ್ರ
ನಾರಾಯಣಽಽ' ಎಂಬ ನವದೈವವ
ಆವಿಷ್ಕರಿಸಿದೆಯೈ ಧೀರ,ಧೀರೋದಾತ್ತ ;
ನಿನಗಾರು ಸಾಟಿಯೈ , ಹಿಂದೆ ಮುಂದೆ ?
ಶ್ರೀವಿವೇಕಪ್ರಭೋ, ತವ ಸುಪ್ರಭಾತಂ! ॥ ೩ ॥

**ಕು**ಸುಮಬಾಣನ ಗೆದ್ದ, ಕುಸುಮಮೃದು ಹೃದಯನೇ,
ಅಂತೆ ಸಂಕಲ್ಪದಲಿ ವಜ್ರಸಮನೆ,
ಶ್ರೀಮಾತೆ ಶಾರದೆಯ ಹರಕೆಗಳನಾಂತವನೆ,
ದಿವ್ಯನೇ 'ದಿವ್ಯ'ಗಳ ದಾಟಿದವನೆ !
ಶ್ರೀವಿವೇಕಪ್ರಭೋ, ತವ ಸುಪ್ರಭಾತಂ! ॥ ೪ ॥

**ಭಾ**ರತ ಸ್ವಾತಂತ್ರ್ಯ ಸಂಗ್ರಾಮ ಸ್ಫೂರ್ತಿಯೇ,
ಭರತಖಂಡದ ಭವ್ಯ ಧವಳಕೀರ್ತಿ
ನೀನೆಲ್ಲೈ , ಪ್ರಣತಾರ್ತಿಹರನೆ, ಕ್ಷಿತಿಸಂಪೂಜ್ಯ ,
ಅಮೃತಪುತ್ರನೆ, ನಿರ್ಭಯಾಕಾರನೆ!
ಶ್ರೀವಿವೇಕಪ್ರಭೋ, ತವ ಸುಪ್ರಭಾತಂ! ॥ ೫ ॥

**ಅ**ಧ್ಯಾತ್ಮ, ವಿಜ್ಞಾನಗಳ ಸಮನ್ವಯಮೂರ್ತಿ
ನೀನೆಲ್ಲೈ ; ನಿನ್ನ ವ್ಯಕ್ತಿತ್ವ ಹಲವು
ವರ್ಣಗಳ ಸಂಕೀರ್ಣ; ಪೂರ್ಣಮಾನವ ನೀನು;
ಉದ್ಧರಿಸು ಈ ನಾಡನಿಂದು ಬಂದು !
ಶ್ರೀವಿವೇಕಪ್ರಭೋ, ತವ ಸುಪ್ರಭಾತಂ! ॥ ೬ ॥

— ಡಾ. ಸಿ.ಪಿ.ಕೆ

# ಸೂಕ್ತಿಪ್ರಭ

**ಪ್ರ**ಪಂಚದಲ್ಲಿ ಸುಖವೊಂದೇ ಇದ್ದಿದ್ದರೆ ನಾನೆಂದಿಗೂ ಧೈರ್ಯ ಮತ್ತು ತಾಳ್ಮೆ - ಇವುಗಳನ್ನು ಕಲಿಯುತ್ತಿರಲಿಲ್ಲ.

— ಹೆಲೆನ್ ಕೆಲರ್

**ವಿ**ಶ್ವವೆಲ್ಲ ಏಕ. ಅಲ್ಲಿ ಮತ್ತೊಂದು ಇಲ್ಲ. ಭಿನ್ನತೆಯಿಂದ ನಾವೆಲ್ಲ ಏಕತ್ವದ ಕಡೆಗೆ ಹೋಗುತ್ತಿರುವೆವು. ಕುಲಗಳು ಪಂಗಡಗಳಲ್ಲಿ, ಪಂಗಡಗಳು ಜನಾಂಗಗಳಲ್ಲಿ, ಜನಾಂಗಗಳು ರಾಷ್ಟ್ರಗಳಲ್ಲಿ, ರಾಷ್ಟ್ರಗಳು ಮಾನವಕೋಟಿಯಲ್ಲಿ ಐಕ್ಯವಾಗುತ್ತಿವೆ. ಒಂದರಲ್ಲಿ ಎಷ್ಟೊಂದು ಇಚ್ಛೆಗಳು ಸೇರುತ್ತಿವೆ! ಈ ಏಕತೆಯ ಸಾಕ್ಷಾತ್ಕಾರವೇ ಜ್ಞಾನ ಮತ್ತು ವಿಜ್ಞಾನ.

— ಸ್ವಾಮಿ ವಿವೇಕಾನಂದ

**ಶಿ**ಷ್ಯನು ಆಚಾರ್ಯನಿಂದ ವಿದ್ಯೆಯ ಕಾಲುಭಾಗವನ್ನು ಗ್ರಹಿಸುತ್ತಾನೆ. ಕಾಲುಭಾಗವನ್ನು ಬುದ್ಧಿಶಕ್ತಿಯಿಂದಲೂ, ಕಾಲು ಭಾಗವನ್ನು ಜೊತೆಯ ವಿದ್ಯಾರ್ಥಿಗಳಿಂದಲೂ ಉಳಿದ ಕಾಲು ಭಾಗವನ್ನು ಕಾಲಪರಿಪಾಕದಿಂದಲೂ ತಿಳಿದುಕೊಳ್ಳುತ್ತಾನೆ.

— ಮಹಾಭಾರತ

**ತ**ಪ್ಪುಗಳನ್ನು ಮಾಡುತ್ತ ಸಾಗಿಸಿದ ಜೀವನ ಗೌರವಾನ್ವಿತವಾದುದು; ಆದರೆ ಅಷ್ಟೇ ಅಲ್ಲ, ಏನೂ ಮಾಡದೆ ಕಳೆದ ಜೀವನಕ್ಕಿಂತ ಅದು ತುಂಬಾ ಉಪಯುಕ್ತ ಕೂಡ.

— ಜಾರ್ಜ್ ಬರ್ನಾರ್ಡ್ ಷಾ

**ಮ**ಹತ್ಕಾರ್ಯಗಳನ್ನು ಮಾಡುವಷ್ಟು ನಾವು ದೊಡ್ಡವರು ಅಲ್ಲದಿರಬಹುದು. ಆದರೆ ಸಣ್ಣ ಕಾರ್ಯಗಳನ್ನು ಮಹತ್ವಪೂರ್ಣವಾಗಿ ಮಾಡಬಹುದು.

— ನೆಪೋಲಿಯನ್